**ದಿನಾಂಕಃ 21.01.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಂದುವರಿದ ಪಾಟೀ ಸವಾಲು: 2 ನೇ ಎದುರುದಾರರ / Insurance company ಪರ ವಕೀಲರಾದ ಶ್ರೀ.MEM ರವರಿಂದಃ**

1) ನನ್ನ ಗಂಡನನ್ನು ವಿಕ್ಟೋರಿಯಾ ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡಿ ಮನೆಗೆ ಕಳುಹಿಸಿ ಕೊಟ್ಟರು.

2) ನನ್ನ ಗಂಡನ ತಲೆಗೆ ಮತ್ತು ಕಾಲಿಗೆ ಶಸ್ತ್ರ ಚಿಕಿತ್ಸೆಯನ್ನು ಮಾಡಲಾಗಿತ್ತು. ನನ್ನ ಗಂಡನ ಕಾಲಿಗೆ ಯಾವುದೇ ರಾಡ್ ಹಾಕಿರಲಿಲ್ಲ ಮತ್ತು ನನ್ನ ಗಂಡನ ತಲೆಗೆ ಸಹಾ ಯಾವುದೇ **implant** ಹಾಕಿರಲಿಲ್ಲ.

3) ಅಪಘಾತದ ನಂತರ ಮೊದಲು ನನ್ನ ಗಂಡನನ್ನು ಕೆ.ಸಿ.ಜನರಲ್ ಆಸ್ಪತ್ರೆಗೆ ಕರೆದುಕೊಂಡು ಹೋದೆವು ಮತ್ತು ನಂತರ ಜಯದೇವ ಆಸ್ಪತ್ರೆಗೆ ಕರೆದುಕೊಂಡು ಹೋದೆವು ಮತ್ತು ಅಲ್ಲಿಂದ ವಿಕ್ಟೋರಿಯಾ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ನನ್ನ ಗಂಡನನ್ನು ನಾನು ಮತ್ತು ನನ್ನ ಮೊದಲನೇ ಮಗನಾದ ಗೋವಿಂದರಾಜು ರವರೇ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೇವೆ.

4) ಅಪಘಾತವು ಹೇಗೆ ಆಯಿತು ಮತ್ತು ಯಾವ ಕಾರಣದಿಂದ ನನ್ನ ಗಂಡನಿಗೆ

ಗಾಯಗಳು ಆದವು ಎಂಬ ವಿಷಯವನ್ನು ಆಸ್ಪತ್ರೆಯಲ್ಲಿ ವೈದ್ಯರು ನಮ್ಮ ಬಳಿ ಕೇಳಿ ತಿಳಿದುಕೊಂಡು ಬರೆದುಕೊಂಡಿರುವುದಿಲ್ಲ. ಆಸ್ಪತ್ರೆಗೆ ಕರೆದುಕೊಂಡು ಹೋದಂತಹ ಸಮಯದಲ್ಲಿ ನನ್ನ ಗಂಡನು ಮಾತನಾಡುವ ಸ್ಥಿತಿಯಲ್ಲಿ ಇರಲಿಲ್ಲ.

5) ಮೇಲೆ ಹೇಳಿದಂತಹ ಮೂರೂ ಆಸ್ಪತ್ರೆಗಳಲ್ಲಿ ಪೋಲಿಸ್ ಹೊರಠಾಣೆಗಳು **(out post)** ಇವೆ ಎಂದರೆ ಸರಿ.

6) ನಾವು ಹೋಗಿ ನೋಡಿದಾಗ ನನ್ನ ಗಂಡನು ರಸ್ತೆಯ ಮಧ್ಯದಲ್ಲಿ ಬಿದ್ದಿದ್ದರು. ಮೂರು ರಸ್ತೆಗಳು ಕೂಡುವಂತಹ ಸ್ಥಳದಲ್ಲಿ ನನ್ನ ಗಂಡನು ಬಿದ್ದಿದ್ದರು.

7) ನಿ.ಪಿ.**6** ರಲ್ಲಿ ಹೇಳಿರುವಂತಹ ಮಾಹಿತಿಯು ಸರಿಯಾಗಿ ಇದೆ.

8) ಆ ಸ್ಥಳದಲ್ಲಿ ಯಾವುದೇ ಜೀಬ್ರಾ ಕ್ರಾಸಿಂಗ್ ಇರುವುದಿಲ್ಲ. ಯಾವ ಸ್ಥಳದಲ್ಲಿ ನನ್ನ ಗಂಡನು ಬಿದ್ದಿದ್ದರೋ ಆ ಸ್ಥಳದಲ್ಲಿ ರಕ್ತವು ಬಿದ್ದಿರಲಿಲ್ಲ.

9) ನನ್ನ ಗಂಡನಿಗೆ ಮದ್ಯಪಾನ ಮಾಡುವ ಅಭ್ಯಾಸ ಇತ್ತು ಎಂದರೆ ಸುಳ್ಳು.

10) ನನ್ನ ಗಂಡನು ಮದ್ಯಪಾನ ಮಾಡಿ ನಂತರ ರಸ್ತೆಯಲ್ಲಿ

ಅಡ್ಡಾದಿಡ್ಡಿಯಾಗಿ ಹೋಗುತ್ತಿದ್ದರು ಮತ್ತು ಆ ಕಾರಣದಿಂದ ನನ್ನ ಗಂಡನ ತಪ್ಪಿನಿಂದಲೇ ಅಪಘಾತವು ಆಗಿದೆ ಎಂದರೆ ಸುಳ್ಳು.

11) ಕೆ.ಸಿ.ಜನರಲ್ ಆಸ್ಪತ್ರೆಯಲ್ಲಿ ಮತ್ತು ಜಯದೇವ ಮತ್ತು ವಿಕ್ಟೋರಿಯಾ ಆಸ್ಪತ್ರೆಗಳಲ್ಲಿ ಮಾಡಿರುವಂತಹ ಎಂ.ಎಲ್.ಸಿ. ಅಂದರೆ ನಿ.ಪಿ.**10** ರಲ್ಲಿ ನನ್ನ ಗಂಡನು ಮದ್ಯಪಾನ ಮಾಡಿದ್ದನು ಎಂಬ ವಿಷಯವು ಕಂಡು ಬರುತ್ತದೆ ಎಂದರೆ ಸುಳ್ಳು.

12) ನನ್ನ ಗಂಡನು ಮದ್ಯಪಾನ ಮಾಡಿದ್ದರು ಮತ್ತು ಆತನ ತಪ್ಪಿನಿಂದಲೇ ಅಪಘಾತವು ಆಗಿದೆ ಮತ್ತು ಆ ಕಾರಣದಿಂದಲೇ ಪೋಲಿಸರಿಗೆ ತಕ್ಷಣವೇ ಫಿರ್ಯಾದನ್ನು ಕೊಡಲಿಲ್ಲ ಎಂದರೆ ಸುಳ್ಳು.

13) ಅಪಘಾತದ ಸಂಬಂಧವಾಗಿ ನಾನು ಪೋಲಿಸರಿಗೆ ದೂರನ್ನು ಕೊಟ್ಟಿರುವುದಿಲ್ಲ, ಆದರೆ ನನ್ನ ಮಗನು ಕೊಟ್ಟಿದ್ದಾನೆ. ಅಪಘಾತವು ಆದ ಸುಮಾರು ಒಂದುವರೆ ತಿಂಗಳ ನಂತರ ಪೋಲಿಸರಿಗೆ ಫಿರ್ಯಾದನ್ನು ಕೊಡಲಾಗಿದೆ.

14) ಮೇಲೆ ಹೇಳಿದ ಕೆಎ-**59**-ಎ-**3777** ಸಂಖ್ಯೆಯ ಬಸ್ಸಿನ ಮಾಲೀಕರಾದಂತಹ ಕಣ್ಣನ್ ರವರ ಜೊತೆ ಶಾಮೀಲಾಗಿ ನಂತರ

ನಾವು ಪೋಲಿಸರಿಗೆ ಸುಳ್ಳು ದೂರನ್ನು ನೀಡಿದ್ದೇವೆ ಎಂದರೆ ಸುಳ್ಳು. ಪೋಲಿಸರ ಜೊತೆ ಶಾಮೀಲಾಗಿ ಸುಳ್ಳು ಪೋಲಿಸ್ ದಾಖಲೆಗಳನ್ನು ಸೃಷ್ಠಿ ಮಾಡಿದ್ದೇವೆ ಎಂದರೆ ಸುಳ್ಳು.

15) ಮೇಲೆ ಹೇಳಿದ ಆಸ್ಪತ್ರೆಗಳು ನೀಡಿರುವಂತಹ ಡಿಸ್ಚಾರ್ಜ್ ಸಮ್ಮರಿಗಳು ನಮ್ಮ ಬಳಿ ಇವೆ ಮತ್ತು ಅವುಗಳನ್ನು ನಮ್ಮ ವಕೀಲರ ಬಳಿ ಕೊಟ್ಟಿರಬಹುದು ಮತ್ತು ಅವುಗಳನ್ನು ಹಾಜರುಪಡಿಸಲು ನಮಗೆ ಯಾವುದೇ ತೊಂದರೆ ಇರುವುದಿಲ್ಲ.

16) ನನ್ನ ಮಕ್ಕಳೆಲ್ಲರೂ ಕೇವಲ **8** ನೇ ತರಗತಿ ವರೆಗೆ ವಿದ್ಯಾಭ್ಯಾಸ ಮಾಡಿದ್ದಾರೆ. ನನ್ನ ಮಗ ಗೋವಿಂದರಾಜನು ಚಾಲಕ ವೃತ್ತಿ ಕೆಲಸ ಮಾಡುತ್ತಾನೆ ಮತ್ತು ನನ್ನ ಮಗ ಶ್ರೀನಿವಾಸನು ಕೂಲಿ ಕೆಲಸ ಮಾಡುತ್ತಾನೆ.

17) ನನ್ನ ಗಂಡನಿಗೆ ಸಂಬಂಧಿಸಿದ ಆಧಾರ್ ಕಾರ್ಡ್ ಹಾಜರುಪಡಿಸಲು ತೊಂದರೆ ಇರುವುದಿಲ್ಲ. ಆಧಾರ್ ಕಾರ್ಡ್ ನಲ್ಲಿ ಇರುವ ಮಾಹಿತಿಯ ಪ್ರಕಾರ ಸಾಯುವ ಸಮಯದಲ್ಲಿ ನನ್ನ ಗಂಡನಿಗೆ **58** ವರ್ಷ ವಯಸ್ಸು ಆಗಿತ್ತು.

18) ಸಾಯುವ ಸಮಯದಲ್ಲಿ ನನ್ನ ಗಂಡನಿಗೆ **70**

ವರ್ಷಗಳಿಗಿಂತ ಹೆಚ್ಚಿನ ವಯಸ್ಸು ಆಗಿತ್ತು ಮತ್ತು ನಾನು ಈ ಬಗ್ಗೆ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

19) ನನ್ನ ಗಂಡನು ಚಾಲಕ ವೃತ್ತಿಯನ್ನು ಮಾಡುತ್ತಿದ್ದನು. ನನ್ನ ಗಂಡನ ಚಾಲನಾ ಪರವಾನಗಿಯನ್ನು ಹಾಜರುಪಡಿಸಲು ತೊಂದರೆ ಇಲ್ಲ. ನನ್ನ ಗಂಡನಿಗೆ ಬ್ಯಾಂಕ್ ಅಕೌಂಟ್ ಇರಲಿಲ್ಲ.

20) ಕೇವಲ ಹೆಚ್ಚಿನ ಪರಿಹಾರವನ್ನು ಪಡೆಯಬೇಕು ಎಂಬ ಉದ್ದೇಶದಿಂದ ನನ್ನ ಗಂಡನಿಗೆ ಒಂದು ತಿಂಗಳಿಗೆ **40** ಸಾವಿರ ರೂಪಾಯಿ ಆದಾಯ ಇತ್ತು ಎಂಬುದಾಗಿ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

21) ನನ್ನ ಗಂಡನ ಅಂತ್ಯಕ್ರಿಯೆ ಇತ್ಯಾದಿಗಳಿಗೆ **50** ಸಾವಿರ ರೂಪಾಯಿಗಳು ಖರ್ಚು ಆಗಿದೆ ಎಂದು ನಾನು ಸುಳ್ಳು ಪ್ರತಿಪಾದನೆಯನ್ನು ಮಾಡುತ್ತಿದ್ದೇನೆ ಎಂದರೆ ಸುಳ್ಳು.

22) ನನ್ನ ಗಂಡನು ಸಂಪೂರ್ಣವಾಗಿ ಗುಣಮುಖರಾಗಿದ್ದರು ಮತ್ತು ಆ ಕಾರಣದಿಂದಲೇ ನನ್ನ ಗಂಡನನ್ನು ವಿಕ್ಟೋರಿಯಾ ಆಸ್ಪತ್ರೆಯಿಂದ ಡಿಸ್ಚಾರ್ಜ್ ಮಾಡಿದ್ದಾರೆ ಎಂದರೆ ಸುಳ್ಳು. ಯಾವ ದಿನಾಂಕದಂದು

ವಿಕ್ಟೋರಿಯಾ ಆಸ್ಪತ್ರೆಯಿಂದ ನನ್ನ ಗಂಡನನ್ನು ಡಿಸ್ಚಾರ್ಜ್ ಮಾಡಿದ್ದಾರೆ ಎಂದು ಹೇಳಲು ಸಾಧ್ಯವಿಲ್ಲ. ಆಸ್ಪತ್ರೆಯಿಂದ ಡಿಸ್ಚಾರ್ಜ್ ಆದ ಎರಡು ವಾರಗಳಿಗೆ ನನ್ನ ಗಂಡನು ಮರಣ ಹೊಂದಿದನು.

23) ಅಪಘಾತದಿಂದ ಆದಂತಹ ಗಾಯಗಳ ಕಾರಣದಿಂದ ನನ್ನ ಗಂಡನು ಮರಣ ಹೊಂದಿಲ್ಲ ಎಂದರೆ ಸುಳ್ಳು. ಕೇವಲ ಪರಿಹಾರವನ್ನು ಪಡೆಯುವ ಉದ್ದೇಶದಿಂದ ನನ್ನ ಗಂಡನು ಅಪಘಾತದಿಂದ ಆದಂತಹ ಗಾಯಗಳ ಕಾರಣದಿಂದ ಮರಣ ಹೊಂದಿದ್ದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸುಳ್ಳು. ನಾನು ಹಾಜರುಪಡಿಸಿರುವ ಮೆಡಿಕಲ್ ಬಿಲ್ಲುಗಳನ್ನು ನಾನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸುಳ್ಳು.

**ಪಾಟೀ ಸವಾಲು: 1 ನೇ ಎದುರುದಾರರ ಪರ ವಕೀಲರಿಂದಃ**

ಸದರಿ ಎದುರುದಾರರು ಮತ್ತು ಅವರ ಪರ ವಕೀಲರು ಹಾಜರಿಲ್ಲ. ಆದ ಕಾರಣದಿಂದ ಯಾವುದೇ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.